ಕರ್ನಾಟಕ ವಿಧಾನ ಸಭೆ

ಸೋಮವಾರ 30ನೇ ಮಾರ್ಚ್ 1992ಚೈತ್ರ 10,1914,ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11.20 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು:- (ಶ್ರೀ ಎಸ್. ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಸಕಲೇಶಪುರ ತಾಲ್ಲೂಕಿನ ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು.

(1026) ಶ್ರೀ ಗುರುದೇವ್ (ಸಕಲೇಶಪುರ):- ಮಾನ್ಯ ಗ್ರಾಮೀಣಭವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ ಸಕಲೇಶಪುರ ತಾಲ್ಲೂಕು ವ್ಯಾಪ್ತಿಗೆ ಬರುವ ಚಂಗಡಿಹಳ್ಳಿ, ಯಸಳೂರು ಮತ್ತು ಆನೆಮಹಲ್ ಗ್ರಾಮಗಳಿಗೆ ನೀರು ಸರಬರಾಜಿಲ್ಲದೆ ಸಾರ್ವಜನಿಕರಿಗೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಹಾಗಿದ್ದಲ್ಲಿ ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು?

ಇ. ಈ ಪ್ರದೇಶಗಳಲ್ಲಿ ನೀರು ಸರಬರಾಜು ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ(ಗ್ರಾಮೀಣಾಭವೃದ್ಧಿ ಮತ್ತು ಪಂಚಾಯತ್‌ರಾಜ್ ಮತ್ತು ಕಂದಾಯ ಸಚಿವರು):-

ಅ. ಬಂದಿದೆ.

ಆ. ಚಂಗಡಿಹಳ್ಳಿ ಗ್ರಾಮಕ್ಕೆ 1991-92ನೇ ಸಾಲಿನಲ್ಲಿ ಕಿರು ನೀರು ಸರಬರಾಜು ಯೋಜನೆ ಮಂಜೂರಾಗಿದ್ದು ಕಾಮಗಾರಿಯನ್ನು ಕೂಡಲೇ ಪ್ರಾರಂಭಮಾಡಲಾಗುವುದು.

ಯಸಳೂರು ಗ್ರಾಮದ ಕುಡಿಯುವ ನೀರಿನ ಪುನರುಜ್ಜೀವನ ಯೋಜನೆಯು 1991-92ರ ಅನುಬಂಧ-ಇ ನಲ್ಲಿ ಸೇರಿದ್ದು, ಕೆಲಸ ತೆಗೆದುಕೊಳ್ಳಲು ಕ್ರಮಕ್ಕೆಗೊಳ್ಳಲಾಗುವುದು.

ಆನೆಮಹಲ್ ಗ್ರಾಮಕ್ಕೆ ನೀರು ಸರಬರಾಜು ಯೋಜನೆಯನ್ನು 1992-93ನೇ ಸಾಲಿನಲ್ಲಿ ಅರ್ಹತೆ ಪ್ರಕಾರ ಪರಿಗಣಿಸಲಾಗುವುದು.

ಇ. ಚಂಗಡಿಹಳ್ಳಿ ಗ್ರಾಮದ ಕಿರು ನೀರು ಸರಬರಾಜು ಯೋಜನೆಯನ್ನು ಬೇಗನೆ ಪ್ರಾರಂಭಿಸಲಾಗುವುದು.

ಯಸಳೂರು ಗ್ರಾಮದ ಪುನರುಜ್ಜೀವನ ಯೋಜನೆಯನ್ನು ಬೇಗನೆ ತೆಗೆದುಕೊಳ್ಳಲಾಗುವುದು.

ಆನೆಮಹಲ್ ಗ್ರಾಮದ ನೀರು ಸರಬರಾಜು ಯೋಜನೆಯನ್ನು 1992-93ನೇ ಕಾರ್ಯಕ್ರಮದಲ್ಲಿ ಪರಿಗಣಿಸಲಾಗುವುದು.

ಶ್ರೀ ಗುರುದೇವ್:- ಸನ್ಮಾನ್ಯ ಅಧ್ಯಕ್ಷರೇ, ಸಕಲೇಶಪುರದಲ್ಲಿ, ಚಂಗಡಹಳ್ಳಿ, ಯಸಳೂರು, ಆನೆಮಹಲ್ ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಾವ ಇರುವುದು

ಸರ್ಕಾರದಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೇನೆ. ಅದಕ್ಕೆ 'ಬಂದಿದೆ' ಎಂದು ಹೇಳಿದ್ದಾರೆ. ಚಂಗಡಹಳ್ಳಿ ಗ್ರಾಮಕ್ಕೆ ಈಗಾಗಲೇ 1991-92ನೇ ಸಾಲಿನಲ್ಲಿ ಕಿರು ನೀರು ಸರಬರಾಜು ಯೋಜನೆ ಮಾಡಿದ್ದೇವೆಂದು ಉತ್ತರ ಕೊಟ್ಟಿದ್ದಾರೆ. ಸನ್ಮಾನ್ಯ ಅಧ್ಯಕ್ಷರೇ, ಈ ಚಂಗಡಹಳ್ಳಿ ಗ್ರಾಮದಲ್ಲಿ ಹಿಂದಿನ ಜನಸಂಖ್ಯೆ ಆಧಾರದ ಮೇಲೆ ಈ ಕಿರು ನೀರು ಸರಬರಾಜು ಯೋಜನೆಯನ್ನು ಮಾಡಿದ್ದಾರೆ. ಆದರೆ ಈ ಗ್ರಾಮದಲ್ಲಿ ಇವತ್ತಿನ ದಿವಸ ಜನಸಂಖ್ಯೆ ಹೆಚ್ಚಾಗಿರುವುದರಿಂದ ತಮ್ಮ ಮುಖೇನ, ಮಾನ್ಯ ಮಂತ್ರಿಗಳಿಗೆ ಕೇಳುವುದಿಷ್ಟೆ ಈ ಚಂಗಡಹಳ್ಳಿ ಗ್ರಾಮಕ್ಕೆ ಏನು ಕಿರು ನೀರು ಸರಬರಾಜು ಯೋಜನೆಯನ್ನು ಮಾಡಿದ್ದೀರಿ. ಅದನ್ನು ಬೇರೆ ಗ್ರಾಮಕ್ಕೆ ಹಾಕಿ, ಈ ಗ್ರಾಮದಲ್ಲಿ ಈಗ ಜನಸಂಖ್ಯೆ ಜಾಸ್ತಿಯಾಗಿರುವುದರಿಂದ ಈ ಗ್ರಾಮಕ್ಕೆ ಎನ್.ಆರ್.ಡಬ್ಲೂ.ಎಸ್ ಅನ್ನು ಮಾಡಿಕೊಡಬೇಕೆಂದು ನಾನು ಮನವಿ ಮಾಡುತ್ತೇನೆ. ಅದೇ ರೀತಿ ಯಸಳೂರಿನಲ್ಲಿ ಸುಮಾರು 61ನೇ ಇಸವಿಯಲ್ಲಿ ಆ ಯೋಜನೆಯನ್ನು ಹಾಕಿಕೊಂಡು ಇವತ್ತಿನ ದಿವಸ ನೀರು ಸರಬರಾಜು ಮಾಡುತ್ತಿದ್ದಾರೆ. ಈಗಾಗಲೇ ಜಿಲ್ಲಾಪರಿಷತ್ ವತಿಯಿಂದ ಒಂದು ಲಕ್ಷ ರೂಪಾಯಿಯನ್ನು ರಿಪೇರಿಗಾಗಿ ಕೊಟ್ಟಿದ್ದಾರೆ. ಆದರೆ, ಈ ಹಣ ಯಾವುದಕ್ಕೂ ಸಾಲುವುದಿಲ್ಲ. ಆ ಒಂದು ದೃಷ್ಟಿಯಿಂದ ಯಸಳೂರು ಗ್ರಾಮಕ್ಕೂ ಒಂದು ಹೊಸ ಎನ್.ಆರ್.ಡಬ್ಲೂ.ಎಸ್,ಸ್ಕೀಮ್‌ನಲ್ಲಿ ಮಾಡಿಕೊಡಬೇಕೆಂದು ಮಂತ್ರಿಗಳನ್ನು ಕೇಳುತ್ತೇನೆ. ಮತ್ತು ಆನೇಮಹಲ್‌ನಲ್ಲಿ ಇವತ್ತಿನವರೆಗೂ ಇಲ್ಲ, 1992-93ಕ್ಕೆ ಸೇರಿಸುತ್ತೇನೆಂದು ಭರವಸೆ ಕೊಟ್ಟಿದ್ದಾರೆ. ದಯಮಾಡಿ ಇದನ್ನು ಮಾಡಿಕೊಡಬೇಕೆಂದು ತಮ್ಮ ಮುಖೇನ ಮಂತ್ರಿಗಳನ್ನು ಕೇಳಿಕೊಳ್ಳುತ್ತಾ, ಇದಕ್ಕೆ ತಮ್ಮಿಂದ ಉತ್ತರವನ್ನು ನಿರೀಕ್ಷಣೆ ಮಾಡುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರು ಹೇಳಿದ ಹಾಗೆ ಚಂಗಡಹಳ್ಳಿ ಮತ್ತು ಯಸಳೂರುಗಳಲ್ಲಿ ಆಗ್‌ಮೆಂಟೇಷನ್ ಪ್ರೋಗ್ರಾಮ್‌ನ್ನು ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥಾದ್ದನ್ನು ಹೇಳಿದ್ದೇವೆ. ಉಳಿದಂಥ ಈ ಆನೇಮಹಲ್ ಗ್ರಾಮ ಕೂಡ 1992-93 ರಲ್ಲಿ ಅಪೆಂಡಿಕ್ಸ್ 'ಸಿ' ನಲ್ಲಿ ಸೇರಿದೆ. ಅದನ್ನೂ ಕೂಡ ತೆಗೆದುಕೊಳ್ಳುತ್ತೇವೆ.

ಶ್ರೀ ಗುರುದೇವ್ : ಮಾನ್ಯ ಅಧ್ಯಕ್ಷರೆ, ನಾನು ಹೇಳುತ್ತಿರುವುದು ಏನೆಂದರೆ ಚಂಗಡಹಳ್ಳಿಗೆ ಈಗಾಗಲೇ ಒಂದು ಕಿರು ನೀರು ಯೋಜನೆಯನ್ನು ಮಂಜೂರು ಮಾಡಿದ್ದೀರಿ. ಆದರೆ, ಈಗ ಜನಸಂಖ್ಯೆ ಜಾಸ್ತಿಯಾಗಿರುವ ದೃಷ್ಟಿಯಲ್ಲಿ ಆ ಗ್ರಾಮಕ್ಕೆ ಎನ್.ಆರ್.ಡಬ್ಲೂ.ಎಸ್.ನ್ನು ಮಾಡಿಕೊಡಬೇಕು. ಮತ್ತೆ ಯಸಳೂರಿಗೆ ಏನು ಒಂದು ಲಕ್ಷ ರೂಪಾಯಿಯನ್ನು ಕೊಟ್ಟಿದ್ದೀರಿ, ಅದು ಯಾವುದಕ್ಕೂ ಸಾಲುವುದಿಲ್ಲ. ಆದ್ದರಿಂದ ಅಲ್ಲಿಗೂ ಒಂದು ಹೊಸ ಎನ್.ಆರ್.ಡಬ್ಲ್ಯೂ.ಎಸ್.ನ್ನು ಮಾಡಿಕೊಡಬೇಕೆಂದು ತಮ್ಮ ಮುಖೇನ ಕೇಳುತ್ತಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :- ನಾನು ಅದನ್ನು ಎಕ್ಸಾಮಿನ್ ಮಾಡಿಸುತ್ತೇನೆ.

ಗ್ರಾಮೀಣ ಅಭಿವೃದ್ಧಿ ಕಾಮಗಾರಿಗಳು.

(2350) ಶ್ರೀ ಕೆ.ಸಿದ್ದಯ್ಯ (ಸಂತೇಮಾರನಹಳ್ಳಿ):- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ. ಗ್ರಾಮೀಣ ಪ್ರದೇಶದ ಫಲಾನುಭವಿಗಳಿಗೆ ನೀಡುತ್ತಿರುವ ವಿವಿಧ ಸಹಾಯಗಳ ಭೌತಿಕ ಪರಿಶೀಲನೆಯನ್ನು ಜಿಲ್ಲಾ ಪರಿಷತ್ತುಗಳಿಂದ ಆಗುತ್ತಿರುವುದಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?